MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - MONDAY 3-4-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

### ಮಲೇಶೀಯಯನ್ ಪಾಮ್ ಎಣ್ಣೆ ದರ ಹಿಂದಿನ 18 ದಿನಗಳ ಗರಿಷ್ಠ ಮಟ್ಟದಲ್ಲಿ

ಒಪೆಕ್ ಇಂಧನ ತೈಲ ಉತ್ಪಾದಕರು ತೈಲ ಉತ್ಪಾದನೆ ಕಡಿತಗೊಳಿಸಲು ನಿರ್ಧರಿಸಿದ ನಂತರ, ಬಯೋಡೀಸೆಲ್‌ಗೆ ಬಳಸಲು ಪಾಮೆಣ್ಣೆಗೆ ಬೇಡಿಕೆ ಹೆಚ್ಚಳ ಗುಮಾನಿಯಿಂದ ಹಾಗೂ ವರ್ತಕ ಲಾಭಗಳಿಕೆಗಿಳಿದರಿಂದ ಮಲೇಶಿಯನ್ ಪಾಮೆಣ್ಣೆಗೆ ಬೇಡಿಕೆ ಹೆಚ್ಚಳವಾಗಿ ದರ ಹಿಂದಿನ 18 ದಿನಗಳ ಗರಿಷ್ಠ ಮಟ್ಟ ತಲುಪಿದೆಯೆನ್ನಲಾಗಿದೆ. ದರ 57 ರಿಂಗಿಟ್ಸ್ (1.47 ಶೇಕಡಾ) ಹೆಚ್ಚಳದೊಂದಿಗೆ 3941 ರಿಂಗಿಟ್ಸ್ ($ 894.46) ಕ್ಕೆ ಹೆಚ್ಚಳವಾಗಿದೆ.

### ಕಾಕಿನಾಡದ ಪಾಮೆಣ್ಣೆ ಫಾರ್ಮ್‌ನಲ್ಲಿ ಅಗ್ನಿ ಅವಗಢ

ಕಾಕಿನಾಡದ ವೆಲ್ಧುರಿ(ಪಿಟಾಪುರ ಮಂಡಲ) ಎಂಬಲ್ಲಿ ಅಗ್ನಿ ಅವಗಢ ಸಂಭವಿಸಿದ್ದು, ಪಾಮೆಣ್ಣೆ ಡ್ರಮ್‌ಗಳಿಗೆ ಬೆಂಕಿ ತಗುಲಿದ್ದು, ಅಗ್ನಿ ಶಾಮಕ ದಳದವರು ಬೆಂಕಿ ಹತೋಟಿಗೆ ತರಲು ಶ್ರಮಿಸುತ್ತಿದ್ದಾರೆನ್ನಲಾಗಿದೆ.

### ಭಾರತ ಹಾಗೂ ಮಲೇಶಿಯಾ ಮಧ್ಯೆ ರುಪಾಯಿ ಮೂಲಕ ವ್ಯವಹಾರ

ಭಾರತ ಹಾಗೂ ಮಲೇಶಿಯಾ ನಡುವಿನ ಪಾವತಿ ವ್ಯವಹಾರ ಈಗ ಭಾರತೀಯ ಕರೆನ್ಸಿ ರುಪಾಯಿ ಮೂಲಕ ಮಾಡಬಹುದೆನ್ನಲಾಗಿದೆ. ಕೌಲಾಲಂಪೂರ್ ಇಂಡಿಯಾ ಇಂಟರ್ ನೇಶನಲ್ ಬ್ಯಾಂಕ್ ಆಫ್ ಮಲೇಶಿಯಾ ( IIBM) ರುಪಾಯಿ VOSTRO ಅಕೌಂಟ್ ಸೌಲಭ್ಯದಿಂದ ಸಂಬಂಧಿತ ಭಾರತೀಯ ಯೂನಿಯನ್ ಬ್ಯಾಂಕ್ ಮೂಲಕ ವ್ಯವಹಾರ ಮಾಡಬಹುದೆನ್ನಲಾಗಿದೆ.

### ಗೋವಾದಲ್ಲಿ ಕಚ್ಚಾ ಗೋಡಂಬಿ ಖರೀದಿ ದರ ಸರಕಾರಿ ಬೆಂಬಲದಿಂದ ರೂ 25 ಹೆಚ್ಚಳ

ಗೋವಾ ರಾಜ್ಯ ಬಜೆಟ್‌ನಲ್ಲಿ ಕಚ್ಚಾ ಗೋಡಂಬಿಗೆ ಕಿಲೋ ಗ್ರಾಂ 1ಕ್ಕೆ ರೂ 25 ರಂತೆ ಬೆಂಬಲಬೆಲೆಯೊಂದಿಗೆ ಖರೀದಿಸಲು ಹಣ ಮೀಸಲಿರಿಸಲಾಗಿದೆ. ರೈತರಿಗೆ ಇದರಿಂದ ಕಚ್ಚಾ ಗೋಡಂಬಿ ದರ ಈಗಿರುವ ರೂ 125 ಕ್ಕೆ ರೂಬ 25 ಸೇರಿ ಒಟ್ಟು ರೂ 150 ಲಭಿಸಿದೆಯೆನ್ನಲಾಗಿದೆ.

### ಯು.ಎಸ್ ಸೋಯಾಬೀನ್ ದರ ಹೆಚ್ಚಳ

ಎಪ್ರಿಲ್ ಆರಂಭದಲ್ಲಿ ಯು.ಎಸ್ ಸೋಯಾಬೀನ್ ದರ ಬಶೆಲ್‌ಗೆ $ 15.2 ಕ್ಕೆ ಹೆಚ್ಚಳವಾಗಿದ್ದು 1 ತಿಂಗಳ ಗರಿಷ್ಠವೆನ್ನಲಾಗಿದೆ. ಒಪೆಕ್ ರಾಷ್ಟ್ರಗಳ ಒಕ್ಕೂಟ ಇಂಧನ ತೈಲ ಉತ್ಪಾದನೆ ಕಡಿತಗೊಳಿಸಲು ನಿರ್ಧರಿಸಿದ ನಂತರ ಬಯೋಡೀಸೆಲ್ ಬಳಕೆಗೆ ಸೋಯಾಬೀನ್, ಪಾಮೆಣ್ಣೆಗೆ ಬೇಡಿಕೆ ಹೆಚ್ಚಳವಾಗಲಾರಂಭಿಸಿದೆಯೆನ್ನಲಾಗಿದೆ. ಅರ್ಜೆಂಟಿನಾದಲ್ಲಿ ಬರ ಪರಿಸ್ಥಿತಿಯಿಂದ ಅಲ್ಲಿನ ಸೋಯಾಬೀನ್ ಉತ್ಪಾದನೆ ತೀವ್ರ ಇಳಿಕೆಯಾಗಿದೆಯೆನ್ನಲಾಗಿದ್ದು, ಅಲ್ಲಿನ ಸೋಯಾಎಣ್ಣೆ, ಸೋಯಾಮೀಲ್ ಪೂರೈಕೆ ಇಳಿಕೆಯಾಗಲಿದೆಯೆನ್ನಲಾಗಿದೆ.